ನಾಚಿಕೆಪಟ್ಟುಕೊಳ್ಳುವ ಅಥವಾ ಅಸಹ್ಯಪಟ್ಟುಕೊಳ್ಳುವಂತಾದ್ದಲ್ಲ ಎನ್ನುವುದನ್ನು ಮತ್ತೆ ಮತ್ತೆ ತಿಳಿಸಿಹೇಳಬೇಕು. ಜನನಾಂಗಗಳನ್ನು ಯಾವುದೋ ಅಡ್ಡ ಹೆಸರುಗಳಿಂದ ಕರೆಯದೆ ಸರಿಯಾದ ವೈಜ್ಞಾನಿಕವಾದ ಶಬ್ದಗಳನ್ನು ಬಳಸಬೇಕು. ಮಕ್ಕಳು ನಗ್ನರಾಗಿದ್ದಾಗ, 'ಶೇಮ್ ಶೇಮ್' ಆಟ ಆಡುವುದಕ್ಕೆ ನಮಗೂ ಇಷ್ಟ, ಮಕ್ಕಳೂ ಅದರಿಂದ ತಾತ್ಕಾಲಿಕವಾಗಿ ಖುಷಿಯಾದಂತೆ ಕಂಡುಬರುತ್ತಾರೆ. ಆದರೆ ಈ ರೀತಿಯ ಆಟಗಳನ್ನು ಪ್ರೋತ್ಸಾಹಿಸದಿರಿ.

### ಐದು ವರ್ಷದ ಹೊತ್ತಿಗೆ..

ಇದೆಲ್ಲಕ್ಕಿಂತ ಕಷ್ಟದ ಹಂತ ಬರುವುದು ಮಗುವಿಗೆ ನಾಲ್ಕೈದು ವರ್ಷವಾದಾಗ. ಆಗ ಮಗು ನಮಗೆ ಉತ್ತರಿಸಲು ತೊಡಕಾಗುವ ಮತ್ತು ಅದಕ್ಕಿಂತ ಇರಿಸುಮುರಿಸಾಗುವ ಪ್ರಶ್ನೆಗಳನ್ನು ಕೇಳತೊಡಗುತ್ತದೆ. 'ನಾನು ಹುಟ್ಟಿದ್ದು ಹೇಗೆ?; ನಾನು ಅಮ್ಮನ ಹೊಟ್ಟೆಯೊಳಗೆ ಹೇಗೆ ಹೋದೆ?; ಮದುವೆಯಾದ ಮೇಲೆ ಮಾತ್ರ ಮಕ್ಕಳು ಯಾಕಾಗುತ್ತವೆ?; ನನ್ನ ಜನನಾಂಗಗಳು ಹೀಗಿದ್ದರೆ, ಅವರದ್ದು (ಬೇರೆ ಲಿಂಗ ಮಗುವಿನದ್ದು) ಯಾಕೆ ಹಾಗಿದೆ?; (ಪ್ರಾಣಿಗಳ ಲೈಂಗಿಕ ಕ್ರಿಯೆಯನ್ನು ನೋಡಿ) ಅವು ಹಾಗೇಕೆ ಮಾಡುತ್ತವೆ?'– ಮುಂತಾಗಿ.

ಹದಿವಯಸ್ಸಿನ ಲೈಂಗಿಕ ಕುತೂಹಲವನ್ನು ಸಂಭಾಳಿಸುವುದು ಕಷ್ಟದ ವಿಚಾರ ಎಂದು ಲೈಂಗಿಕ ತಜ್ಞರು ಹೇಳುತ್ತಾರೆ. ನನ್ನ ಅಭಿಪ್ರಾಯದಲ್ಲಿ ನಾಲ್ಕು ವರ್ಷದ ಮಗುವಿನ ಮೇಲಿನ ಪ್ರಶ್ನೆಗಳಿಗೆ ಉತ್ತರಿಸುವುದು ಇನ್ನೂ ಹೆಚ್ಚಿನ ಸವಾಲಿನದ್ದಾಗಿರುತ್ತದೆ. ಮಗುವಿಗೆ ಎಲ್ಲವನ್ನೂ ವೈಜ್ಞಾನಿಕವಾಗಿ ವಿವರಿಸಬೇಕು ಎಂದು ತಜ್ಞರು ಹೇಳಿ ಕೈತೊಳೆದುಕೊಳ್ಳುತ್ತಾರೆ. ಆದರೆ ಇದು ಅವರು ಹೇಳುವಷ್ಟು ಸರಳವಲ್ಲ ಎಂದು ಇದರ ಬಗೆಗೆ ಪ್ರಯತ್ನಿಸಿದವರಿಗೆ ಮಾತ್ರ ಗೊತ್ತು. ಹಾಗಾಗಿ ನಾವೆಲ್ಲಾ ಹೆಚ್ಚಿನ ವಿಷಯಗಳಲ್ಲಿ ಜವಾಬ್ದಾರಿಯನ್ನು 'ದೇವರು'ಗಳ ಮೇಲೆ ಹೊರಿಸಿ (ದೇವರಿಂದ ನೀನು ಹುಟ್ಟಿದ್ದು. ಅವನೇ ನಿನ್ನನ್ನು ಅಮ್ಮನ ಹೊಟ್ಟೆಯಲ್ಲಿ ಕಳಿಸಿದ್ದು) ಅಲ್ಲಿಂದ ಜಾಗ ಖಾಲಿಮಾಡುತ್ತೇವೆ! ಇನ್ನೂ ಕೆಲವು ಪ್ರಶ್ನೆಗಳಿಗೆ ಮಗುವನ್ನು 'ತಲೆಹರಟೆ, ಅಧಿಕಪ್ರಸಂಗಿ' ಎಂದು ದಬಾಯಿಸಿ ಬಾಯಿಮುಚ್ಚಿಸುತ್ತೇವೆ.

ಆದರೆ ಮಗುವಿನ ಕುತೂಹಲವೇನೂ ತಣಿದಿರುವುದಿಲ್ಲ. ತನ್ನ ಪ್ರಶ್ನೆಗಳಿಗೆ ಉತ್ತರಿಸಲು ದೇವರು ಸಿಗದ ಕಾರಣ ಅದು ತನ್ನ ಸಹಪಾಠಿಗಳೊಂದಿಗೆ ಚರ್ಚೆ ಮಾಡುತ್ತದೆ! ಆಗ ಅಪ್ಪ ಅಮ್ಮ ಒಟ್ಟಿಗೆ ಮಲಗಿರುವುದನ್ನು ನೋಡಿರುವ ಯಾವುದೋ ಒಂದು ಮಗು ತನಗೆ ತಿಳಿದಿರುವ ರೀತಿಯಲ್ಲಿ ಎಲ್ಲಾ ವಿವರಿಸುವ ಮುಂದಾಳುತನವನ್ನು ತೋರುತ್ತದೆ. ಇದೆಲ್ಲದರ ಒಟ್ಟು ಪರಿಣಾಮವೆಂದರೆ ನಾವು ನಮ್ಮ ಮುಜುಗರವನ್ನು ತಪ್ಪಿಸಿಕೊಳ್ಳಲು ಮಗುವನ್ನು ಅವೈಜ್ಞಾನಿಕ ವಿಚಾರಗಳಿಗೆ ಒಡ್ಡುತ್ತೇವೆ.

ತನ್ನದೇ ಜನನಾಂಗಗಳ ಜೊತೆ ಗುಪ್ತವಾಗಿ ಆಟವಾಡಿ ಆನಂದಿಸುವುದು, ಅನ್ಯ ಲಿಂಗದ ಮಗುವಿನೊಡನೆ ಲೈಂಗಿಕ ಸಾಹಸಕ್ಕೆ ಕೈ ಹಾಕುವುದು– ಮುಂತಾದವು ಪ್ರಾರಂಭವಾಗುವುದೂ ಇದೇ ವಯಸ್ಸಿನಿಂದ. ಈ ವಯಸ್ಸಿನಲ್ಲಿ ದೊಡ್ಡವರಿಗೆ ಕಾಣದಂತೆ ಗುಟ್ಟಾಗಿ ಆಡಲು ಮಕ್ಕಳು ಹೆಚ್ಚು ಇಷ್ಟಪಡುವ ಆಟವೆಂದರೆ 'ಅಪ್ಪ ಅಮ್ಮನ' ಆಟ! ಇಪ್ಪತ್ತೊಂದನೇ ಶತಮಾನದ ಕಂಪ್ಯೂಟರ್ ಯುಗದಲ್ಲೂ ಮನುಷ್ಯನ ಈ ರೀತಿಯ ಮೂಲಭೂತ ಪ್ರವೃತ್ತಿಗಳೇನು ಬದಲಾಗಿಲ್ಲ, ಬರೀ ರೂಪಾಂತರಗೊಂಡಿರಬಹುದಷ್ಟೇ.

ಇಷ್ಟೆಲ್ಲಾ ಇದ್ದರೂ ಶಿಕ್ಷಣ ನೀಡುವ ಭರದಲ್ಲಿ, ಐದು ವರ್ಷದ ಮಗುವಿಗೆ ಸಂಪೂರ್ಣ ಲೈಂಗಿಕ ಕ್ರಿಯೆಯ ವಿವರಣೆ ನೀಡುವುದು ಸೂಕ್ತವಲ್ಲ. ಕೆಲವೊಂದು ವಿಚಾರವನ್ನು 'ದೇವರ' ಜವಾಬ್ದಾರಿಗೆ ಬಿಟ್ಟರೂ, ಆ ವಯಸ್ಸಿನಲ್ಲಿ ಗ್ರಹಿಸಬಹುದಾದ್ದನ್ನು ಹೇಳಲೇಬೇಕು. ಗಂಡು ಹೆಣ್ಣಿನಲ್ಲಿರಬಹುದಾದ ವ್ಯತ್ಯಾಸಗಳು ಮತ್ತು ಹೊಸ ಜೀವದ ಸೃಷ್ಟಿಗೆ ಇಬ್ಬರ ಅವಶ್ಯಕತೆ ಇರುವುದನ್ನು ಸ್ಥೂಲವಾಗಿ ವಿವರಿಸಬಹುದು. ಮಕ್ಕಳನ್ನು ಲೈಂಗಿಕವಾಗಿ ದುರ್ಬಳಕೆ ಮಾಡುವವರಿಂದ ಉಳಿಸಲು ಅನುಚಿತ ಸ್ಪರ್ಷ ಮತ್ತು ಕ್ರಿಯೆಗಳ ಬಗೆಗೆ ಎಚ್ಚರಿಸಿ. ಪ್ರತಿ ಹಂತದಲ್ಲಿಯೂ ಮಗುವಿಗೆ, 'ಹೆಚ್ಚಿನ ವಿಚಾರವನ್ನು ಸೂಕ್ತ ಸಮಯದಲ್ಲಿ ಹೇಳುತ್ತೇನೆ. ಯಾವಾಗ ಬೇಕಾದರೂ ನಿನ್ನ ಅನುಮಾನಗಳನ್ನು ನನ್ನ ಹತ್ತಿರ ಕೇಳಬಹುದು. ಬೇರೆಯವರು ಹೇಳಿದ್ದನ್ನು ನಂಬುವ ಮೊದಲು ನನ್ನಿಂದ ದೃಢಪಡಿಸಿಕೊ' ಎನ್ನುವ ಸಂದೇಶ ತಲುಪಿಸಿ. ಆಗ ಮಗು ಇತರರಿಂದ ಪಡೆದ ತಪ್ಪು ಮಾಹಿತಿಗಳಿಂದ ತೊಂದರೆಗೊಳಗಾಗುವುದಿಲ್ಲ.

### ಹನ್ನೆರಡು ವರ್ಷಗಳಾಗುವಾಗ..

ಸುಮಾರು ಹನ್ನೆರೆಡು ವರ್ಷವಾಗುವ ಹೊತ್ತಿಗೆ ಮಗುವಿಗೆ ಪೂರ್ಣ ಚಿತ್ರಣ ಕೊಡಲೇಬೇಕು. ಇದು ಈ ಕೆಳಗಿನ ವಿಚಾರಗಳನ್ನು ಒಳಗೊಂಡಿರಬೇಕು.

★ ಲೈಂಗಿಕ ಕ್ರಿಯೆಯ ಸಮಗ್ರ ವಿವರಣೆಯನ್ನು ವೈಜ್ಞಾನಿಕವಾಗಿ, ಸಾಧ್ಯವಿದ್ದರೆ ಸಚಿತ್ರವಾಗಿ ವಿವರಿಸಿ. ಅವರ ಭಾವನೆಗಳನ್ನು ಸಹಜವಾಗಿ ಆನಂದಿಸಬಹುದೆಂದೂ, ಆದರೆ ನಿಜವಾದ ಅನುಭವಕ್ಕೆ ಸಮಯವಿನ್ನೂ ಸೂಕ್ತವಾದುದಲ್ಲವೆಂದು ತಿಳಿಸಿ.

★ 'ಲೈಂಗಿಕ ಕ್ರಿಯೆ ಒಂದು ಅನನ್ಯವಾದ ಅನುಭವ. ಇದು ಗಂಡು ಹೆಣ್ಣುಗಳನ್ನು ಪ್ರೀತಿಯಲ್ಲಿ ಬಂಧಿಸಿ ಮಾನವ ಕುಲವನ್ನು ಮುಂದುವರಿಸಲು ಸಹಾಯ ಮಾಡುತ್ತದೆ. ಆದ್ದರಿಂದ ವಿವಾಹದ ನಂತರ ಮಾತ್ರ ಇದನ್ನು ಪಡೆಯಬೇಕು. ಇಲ್ಲದಿದ್ದರೆ ಇದಕ್ಕೆ ಸಾಮಾಜಿಕ ಮತ್ತು ದೈಹಿಕ ತೊಂದರೆಗಳಾಗಬಹುದು' ಎಂದು ವಿವರಿಸಿ.

★ ಲೈಂಗಿಕ ಜೀವನದಿಂದ ಸಿಗುವ ತೃಪ್ತಿಗಾಗಿ ಮಕ್ಕಳು ಸಾಂಸಾರಿಕ ಹೊಣೆಗಾರಿಕೆಗೆ ಸಿದ್ಧರಾಗಿರಬೇಕು, ಆದ್ದರಿಂದ ಮೊದಲು ಅವರು ವಿದ್ಯಾಭ್ಯಾಸದ ಬಗ್ಗೆ ಮನಸ್ಸನ್ನು ಕೇಂದ್ರೀಕರಿಸಿ ಜೀವನವನ್ನು ರೂಪಿಸಿಕೊಳ್ಳಬೇಕೆಂಬುದನ್ನು ಮನಗಾಣಿಸಿ.

★ ಲೈಂಗಿಕ ತೃಪ್ತಿ ಬರೀ ದೈಹಿಕದ್ದಲ್ಲ, ಇದರಲ್ಲಿ ಮನಸ್ಸಿನ ಪಾಲೇ ಹೆಚ್ಚು. ಹಾಗಾಗಿ ಪತಿ ಪತ್ನಿಯ ಮಧ್ಯೆ ಮಾತ್ರ ಇದು ಸೀಮಿತವಾಗಿದ್ದರೆ ಬಹುಕಾಲ ಇದನ್ನು ಹೊಂದಲು ಸಾಧ್ಯ ಎನ್ನುವುದನ್ನು ಉದಾಹರಣೆಗಳೊಂದಿಗೆ ವಿವರಿಸಿ.

★ ಇದು ಎಲ್ಲ ಪ್ರಾಣಿವರ್ಗಕ್ಕೆ ಸಹಜವಾದದ್ದು ಮತ್ತು ಇದರಲ್ಲಿ ಮುಚ್ಚಿಡುವ ಅಥವಾ ನಾಚಿಕೆಪಟ್ಟುಕೊಳ್ಳುವಂತಹದ್ದೇನು ಇರುವುದಿಲ್ಲ ಎಂದು ತಿಳಿಸಿ.

★ ಲೈಂಗಿಕ ಶುಚಿತ್ವವನ್ನು ಕಾಪಾಡಿಕೊಳ್ಳುವ ವಿಧಾನವನ್ನು ತಿಳಿಸಿ. ಲೈಂಗಿಕ ರೋಗಗಳ ಬಗೆಗೆ ಮಾಹಿತಿ ನೀಡಿ ಮತ್ತು ಅದರಿಂದ ದೂರವಿರುವುದು ಹೇಗೆಂದು ತಿಳಿಸಿ.

★ ಇತರರು ಮಕ್ಕಳನ್ನು ಲೈಂಗಿಕವಾಗಿ ದುರುಪಯೋಗಪಡಿಸಿಕೊಳ್ಳುವ ಬಗೆಗೆ ಎಚ್ಚರಿಸಿ.

★ ಹಸ್ತಮೈಥುನದ ಬಗೆಗೆ ಇರಬಹುದಾದ ತಪ್ಪು ಕಲ್ಪನೆಗಳನ್ನು ನಿವಾರಿಸಿ.

★ ಮಕ್ಕಳು ಹದಿನೈದು ವರ್ಷದವರಾಗುವ ಹೊತ್ತಿಗೆ, ಮಕ್ಕಳಿಗೆ ಸಲಿಂಗ ಕಾಮದ ಬಗೆಗೆ ತಿಳುವಳಿಕೆ ನೀಡಿ.

★ ಹದಿವಯಸ್ಸಿನ ಮಕ್ಕಳಿಗೆ ವೈಜ್ಞಾನಿಕವಾಗಿ ಬರೆಯಲ್ಪಟ್ಟ ಪುಸ್ತಕವನ್ನು ಓದಲು ಕೊಡಿ. ಹಾಗೆಯೇ ಅಶ್ಲೀಲ ಸಾಹಿತ್ಯ ಮತ್ತು ದೃಶ್ಯಾವಳಿಗಳಿಂದ ದಾರಿ ತಪ್ಪುವ ಬಗೆಗೆ ಎಚ್ಚರಿಸಿ.

ಮಕ್ಕಳಿಂದ ಪ್ರಶ್ನೆಗಳನ್ನು ಅಹ್ವಾನಿಸಿ. ಅವರ ಅನುಭವಗಳನ್ನು ಕೇಳಿ ಮತ್ತು ಅದಕ್ಕೆ ವೈಜ್ಞಾನಿಕ ವಿವರಣೆ ನೀಡಿ. ಇದೆಲ್ಲದರ ಒಟ್ಟು ಉದ್ದೇಶ ಮಕ್ಕಳಿಗೆ ಸಮಗ್ರ ಮತ್ತು ಸರಿಯಾದ ಮಾಹಿತಿ ಸಿಗುವುದಷ್ಟೇ ಅಲ್ಲ, ಎಲ್ಲ ಸಂದರ್ಭಗಳಲ್ಲಿಯೂ ಅವರ ಸಹಾಯಕ್ಕೆ ಪೋಷಕರು ಇದ್ದಾರೆಂಬ ಭರವಸೆಯನ್ನು ಮೂಡಿಸುವುದೂ ಆಗಿರುತ್ತದೆ. ಹೀಗಾದಾಗ ಮಕ್ಕಳಲ್ಲಿ ಹಿಂಜರಿಕೆ, ಪಾಪಪ್ರಜ್ಞೆಗಳು ಮೂಡುವುದಕ್ಕೆ ಅವಕಾಶವಿಲ್ಲದೆ ಅವರ ವ್ಯಕ್ತಿತ್ವ ಸಂಪೂರ್ಣವಾಗಿ ಅರಳುತ್ತದೆ.

### ಇದಿಷ್ಟೇ ಸಾಕೆ?

ಲೈಂಗಿಕ ಶಿಕ್ಷಣ ಪ್ರಾರಂಭಿಸುವ ವಯಸ್ಸು ಮತ್ತು ಶಿಕ್ಷಣದ ರೀತಿಯ ಬಗೆಗೆ ಮೇಲೆ ಹೇಳಿರುವುದು ಅಂತಿಮವೂ ಅಲ್ಲ, ಸಮಗ್ರವೂ ಅಲ್ಲ. ಇದೊಂದು ಸ್ಥೂಲ ರೂಪರೇಷೆ ಅಷ್ಟೇ. ಎಲ್ಲಾ ಮಕ್ಕಳ ಮಾನಸಿಕ ಮತ್ತು ದೈಹಿಕ ಬೆಳವಣಿಗೆ ಒಂದೇ ರೀತಿಯಾಗಿರುವುದಿಲ್ಲ. ಬೋರ್ಡಿಂಗ್ ಶಾಲೆಗಳಲ್ಲಿರುವವರಿಗೆ ಅಥವಾ ವಿದ್ಯಾಭ್ಯಾಸಕ್ಕಾಗಿ ಪೋಷಕರಿಂದ ದೂರವಿರುವ ಮಕ್ಕಳಿಗೆ ಹೆಚ್ಚಿನ ಗಮನ ಬೇಕಾಗಬಹುದು. ದೈಹಿಕ ಬೆಳವಣಿಗೆ ಹೆಚ್ಚಿರುವ ಹೆಣ್ಣುಮಕ್ಕಳಿಗೆ ಹನ್ನೆರಡಕ್ಕೆ ಮೊದಲೇ ಪೂರ್ಣ ಶಿಕ್ಷಣದ ಅಗತ್ಯ ಬೀಳಬಹುದು. ಹಾಗಾಗಿ ಮಗುವಿನ ಕ್ರಿಯೆಗಳು, ಅದು ಬೆಳೆಯುತ್ತಿರುವ ವಾತಾವರಣ, ಅದು ಕೇಳುವ ಪ್ರಶ್ನೆಗಳು, ಮುಂತಾದವನ್ನು ಗಮನಿಸುತ್ತಾ ಅದಕ್ಕೆ ಸೂಕ್ತವಾದಂತೆ ಶಿಕ್ಷಣ ನೀಡುತ್ತಾ ಹೋಗಬೇಕು. ಇದು ಪರಿಣಿತರಿಗೆ ಮಾತ್ರ ಸಾಧ್ಯವಾಗುವುದು ಎಂದು ನಾವೆಲ್ಲಾ ನಿರಾಶರಾಗಬೇಕಿಲ್ಲ. ಪೋಷಕರು ಮಕ್ಕಳ ಕ್ರಿಯೆ, ಪ್ರತಿಕ್ರಿಯೆಗಳನ್ನು ಸಣ್ಣ ಎಚ್ಚರಿಕೆಯಲ್ಲಿ ಗಮನಿಸುತ್ತಿರಬೇಕು. ಮಕ್ಕಳ ಪ್ರಶ್ನೆಗಳಿಗೆ ಅಸಹನೆ ತೋರದೆ ಅವರ ಅನುಮಾನಗಳ ಪರಿಹಾರಕ್ಕೆ ಮುಕ್ತ ವಾತಾವರಣ ಕಲ್ಪಿಸಿದರೆ ಸಾಕು, ಉತ್ತರಗಳನ್ನು ಮಕ್ಕಳೇ ಪಡೆದುಕೊಳ್ಳುತ್ತಾರೆ!

### ಭಯಗಳು ಸಕಾರಣವಾದದ್ದಲ್ಲ

ಎಲ್ಲ ವಿಷಯ ತಿಳಿದ ಮಕ್ಕಳು ತಮ್ಮ ಮುಗ್ಧತೆಯನ್ನು ಕಳೆದುಕೊಳ್ಳಬಹುದು ಅಥವಾ ಹಾದಿ ತಪ್ಪಬಹುದೆಂಬ ಭಯವಿಟ್ಟುಕೊಳ್ಳಬೇಕಿಲ್ಲ. ಪೋಷಕರು ಹೇಳಲಿ ಬಿಡಲಿ ಮಕ್ಕಳಿಗೆ ಮಾಹಿತಿ ಸಿಕ್ಕಿಯೇ ಸಿಕ್ಕುತ್ತದೆ ಎನ್ನುವುದಕ್ಕೆ ನಮ್ಮ ಬಾಲ್ಯದ ಅನುಭವಗಳೇ ಸಾಕ್ಷಿ! ಸಂಶೋಧನೆಗಳ ಪ್ರಕಾರ ವೈಜ್ಞಾನಿಕ ಲೈಂಗಿಕ ಶಿಕ್ಷಣ ಪಡೆದ ಮಕ್ಕಳು ಹಾದಿ ತಪ್ಪುವ ಸಾಧ್ಯತೆಗಳು ಕಡಿಮೆ. ಹಾಗಾಗಿ ನಾವು ಈ ನಿಟ್ಟಿನಲ್ಲಿ ಮೈಚಳಿ ಬಿಟ್ಟು ಕಾರ್ಯ ಪ್ರವೃತ್ತರಾಗಲೇಬೇಕು. ಇದಕ್ಕೆ ಸಬೂಬುಗಳನ್ನು ಹುಡುಕುವುದರ ಅರ್ಥ ನಾವು ಲೈಂಗಿಕ ಶಿಕ್ಷಣ ನೀಡಲು ಸಿದ್ಧರಾಗಿಲ್ಲ ಎನ್ನುವುದಷ್ಟೇ. ಮಕ್ಕಳ ಜೊತೆ ನಾವು ಕಲಿಯುತ್ತಾ ಹೋದಾಗ ನಮ್ಮ ಲೈಂಗಿಕ ಜೀವನಕ್ಕೂ ಹೊಸ ಚೈತನ್ಯ ಮೂಡಬಹುದು!